# ನಿಮ್ಮೊಡನೆ

## ನಾರಿ ತನ್ನ ಮನೆಯಲ್ಲಿ ಕಳುವೊಡೆ...

ಸರ್ಕಾರಿ ಶಾಲೆಗಳನ್ನೇ ಪದೇ ಪದೇ ಸಮೀಕ್ಷೆಗೆ ಒಳಪಡಿಸುವುದು ಯಾಕೆ? ಖಾಸಗಿ ಶಾಲೆಗಳಲ್ಲಿ ಯಾಕೆ ಇಂತಹ ಸಮೀಕ್ಷೆಗಳು ಅಷ್ಟಾಗಿ ನಡೆಯುವುದಿಲ್ಲ? ಡೊನೇಷನ್ ಪಡೆಯುವ ಕೆಲವೇ ಶಾಲೆಗಳನ್ನು ಹೊರತುಪಡಿಸಿದರೆ, ಬಹುತೇಕ ಖಾಸಗಿ ಕಾನ್ವೆಂಟ್‌ಗಳಲ್ಲಿ ಕಳಪೆ ಶಿಕ್ಷಣ ನೀಡಲಾಗುತ್ತಿದೆ.

ಸರ್ಕಾರಿ ಶಾಲೆಗಳ ಗುಣಮಟ್ಟ ಇಳಿಮುಖವಾಗುತ್ತಿದೆ! ಹಾಗಂತ ಸರ್ಕಾರದ ಸಮೀಕ್ಷೆಗಳೇ ಹೇಳುತ್ತಿವೆ! ಸರ್ವಶಿಕ್ಷಣ ಇಲಾಖೆಯ ಶಾಲಾ ಗುಣಮಟ್ಟ ಮೌಲ್ಯಮಾಪನ ಪರಿಷತ್ತು 2012–13ರ ಅವಧಿಯಲ್ಲಿ ನಡೆಸಿದ ಸಮೀಕ್ಷೆಯಲ್ಲಿ ಈ ಅಂಶ ವ್ಯಕ್ತವಾಗಿದೆ. ಸ್ವತಃ ಶಿಕ್ಷಣ ಸಚಿವರೇ ಈ ಅಂಕಿಅಂಶ ಬಿಡುಗಡೆ ಮಾಡಿದ್ದಾರೆ.

ರಾಜ್ಯದ ಎಲ್ಲ ತಾಲ್ಲೂಕುಗಳ ತಲಾ ಮೂರು ಹಿರಿಯ ಪ್ರಾಥಮಿಕ ಶಾಲೆ ಹಾಗೂ ಎರಡು ಪ್ರೌಢಶಾಲೆಗಳನ್ನು ಸಮೀಕ್ಷೆಗೆ ಒಳಪಡಿಸಲಾಗಿದೆ. ಸ್ಯಾಂಪಲ್ ನಡೆಸಿದ ಒಟ್ಟು ಶಾಲೆಗಳ ಸಂಖ್ಯೆ 1,020. ಶೇ.90ಕ್ಕಿಂತ ಅಧಿಕ ಅಂಕ ಪಡೆದ ಶಾಲೆಗಳನ್ನು ಎ–ಪ್ಲಸ್ ಎಂದೂ, ಶೇ.80ಕ್ಕಿಂತ ಅಧಿಕ ಅಂಕ ಪಡೆದ ಶಾಲೆಗಳನ್ನು ಎ ಎಂದೂ–ಹೀಗೆಯೇ ವಿಂಗಡಿಸುತ್ತ ಹೋಗಲಾಗಿದೆ. ಯಾವ ಶಾಲೆಗೂ ಶೇ.90ಕ್ಕಿಂತ ಹೆಚ್ಚು ಅಂಕ ಬಂದಿಲ್ಲ. 80ರಿಂದ 90ರಷ್ಟು ಅಂಕ ಪಡೆದದ್ದು ಇಡೀ ರಾಜ್ಯದಲ್ಲಿ 5 ಶಾಲೆ ಮಾತ್ರ. ಚಿಕ್ಕೋಡಿ, ಉಡುಪಿ ಜತೆಗೆ ಕೊಪ್ಪಳ, ಚಿಕ್ಕಮಗಳೂರು, ಚಿಕ್ಕಬಳ್ಳಾಪುರ, ಬಾಗಲಕೋಟೆ, ಧಾರವಾಡ ಮೊದಲ ಸ್ಥಾನಗಳಲ್ಲಿದ್ದರೆ; ಬೀದರ, ಗುಲ್ಬರ್ಗ, ರಾಯಚೂರು, ಬಳ್ಳಾರಿ, ವಿಜಾಪುರ ದಾವಣಗೆರೆ, ಕೋಲಾರ ಜಿಲ್ಲೆಗಳು ಕೊನೆಯ ಸ್ಥಾನಗಳಲ್ಲಿವೆ.

ಕಲಿಕಾ ಪರಿಸರ, ಒಟ್ಟು ವಾತಾವರಣ– ಸೌಲಭ್ಯ, ನಾಯಕತ್ವ, ಸಮುದಾಯ ಪಾಲ್ಗೊಳ್ಳುವಿಕೆ, ನವೀನ ಚಟುವಟಿಕೆಗಳನ್ನು ಮಾನದಂಡವಾಗಿ ಇಟ್ಟುಕೊಂಡು ಈ ಸಮೀಕ್ಷೆ ನಡೆಸಲಾಗಿದೆ. ಆದರೆ ಸರ್ಕಾರಿ ಶಾಲೆಗಳಲ್ಲಿ ಮುಖ್ಯವಾಗಿ ಬೇಕಾಗಿರುವುದು ಕಲಿಕೆಯ ಅನುಭವ ಇರುವ ಶಿಕ್ಷಕರು. 1ರಿಂದ 5ನೇ ತರಗತಿವರೆಗಿನ ರಾಜ್ಯದ ಬಹುತೇಕ ಶಾಲೆಗಳಲ್ಲಿ 17 ವಿಷಯ ಕಲಿಸಲು ಕೇವಲ ಇಬ್ಬರು ಶಿಕ್ಷಕರಿದ್ದಾರೆ. ಇತ್ತಿತ್ತಲಾಗಿ ಪಾಠಕ್ಕಿಂತ ಹೆಚ್ಚಾಗಿ ಇತರೆ ಕೆಲಸಗಳೇ ಶಿಕ್ಷಕರ ಪಾಲಿಗೆ ಬೀಳುತ್ತಿವೆ. ಇಬ್ಬರಲ್ಲಿ ಒಬ್ಬ ಶಿಕ್ಷಕನಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಚೇರಿ ಅಲ್ಲಿ ಇಲ್ಲಿ ಹೀಗೆ ಅಲೆದಾಟದ ಕೆಲಸಗಳೂ ಇರುತ್ತವೆ.

ಸರ್ಕಾರಿ ಶಾಲೆಗಳಲ್ಲಿ ಅದರಲ್ಲೂ ಗ್ರಾಮೀಣ ಭಾಗದಲ್ಲಿ ವಿದ್ಯಾರ್ಥಿಗಳು ಆಗಾಗ ಗೈರು ಹಾಜರಾಗುತ್ತಾರೆ. ಹೊರಗಿನಿಂದ ಬಂದವರು ನಡೆಸುವ ಸಂದರ್ಶನದಲ್ಲಿ ಗ್ರಾಮೀಣ ಮಕ್ಕಳು ಮುಕ್ತವಾಗಿ ತೆರೆದುಕೊಳ್ಳುವುದಿಲ್ಲ. ಈ ಸರ್ಕಾರಿ ಶಾಲೆಗಳ ಸಾಕಷ್ಟು ಸಂಖ್ಯೆಯ ಮಕ್ಕಳು ಸೃಜನಶೀಲರು, ಕ್ರಿಯಾಶೀಲರು ಆಗಿದ್ದರೂ, ಪರಿಷತ್ತು ನಡೆಸುವ ಬಾಹ್ಯ ಮೌಲ್ಯಮಾಪನದಲ್ಲಿ ಅದು ವ್ಯಕ್ತವಾಗುವುದೇ ಇಲ್ಲ. ಈ ಮೌಲ್ಯಮಾಪಕರ ಪ್ರಶ್ನಿಸುವ ಮಾದರಿಗೆ ಬೆರಗಾಗುವ ಮಕ್ಕಳು ಕೆಲವೊಮ್ಮೆ ಮೌನವಾಗಿಬಿಡುತ್ತಾರೆ. ಅಷ್ಟಕ್ಕೂ ಮೌಲ್ಯಮಾಪನ ಎಂದರೆ ಅದು ಕೆಲವು ಸ್ಯಾಂಪಲ್‌ಗಳು ಮಾತ್ರವಾದ್ದರಿಂದ, ಸಮಗ್ರವಲ್ಲ. ಹಾಗಾಗಿ ವೈಜ್ಞಾನಿಕ ಸಮೀಕ್ಷೆ ಎನಿಸುವುದಿಲ್ಲ ಎಂಬುದು ಬಹಳಷ್ಟು ಅನುಭವಿ ಶಿಕ್ಷಕರ ಅಭಿಮತವಾಗಿದೆ.

ಪ್ರತಿ ಶಾಲೆಯಲ್ಲಿ ಆಂತರಿಕ ಗುಣಮಟ್ಟ ಸುಧಾರಣಾ ಘಟಕ ಸ್ಥಾಪಿಸುವುದಾಗಿ, ಗರಿಷ್ಠಮಟ್ಟದ ಕಲಿಕೆಗೆ ಸೂಕ್ತ ಕಾರ್ಯತಂತ್ರ ರೂಪಿಸುವುದಾಗಿ ಶಿಕ್ಷಣ ಸಚಿವರು ಸಮಜಾಯಿಷಿ ನೀಡಿದ್ದಾರೆ.

ಆದರೆ ಸರ್ಕಾರಿ ಶಾಲೆಗಳನ್ನೇ ಪದೇ ಪದೇ ಸಮೀಕ್ಷೆಗೆ ಒಳಪಡಿಸುವುದು ಯಾಕೆ? ಖಾಸಗಿ ಶಾಲೆಗಳಲ್ಲಿ ಯಾಕೆ ಇಂತಹ ಸಮೀಕ್ಷೆಗಳು ಅಷ್ಟಾಗಿ ನಡೆಯುವುದಿಲ್ಲ? ಡೊನೇಷನ್ ಪಡೆಯುವ ಕೆಲವೇ ಶಾಲೆಗಳನ್ನು ಹೊರತುಪಡಿಸಿದರೆ, ಬಹುತೇಕ ಖಾಸಗಿ ಕಾನ್ವೆಂಟ್‌ಗಳಲ್ಲಿ ಕಳಪೆ ಶಿಕ್ಷಣ ನೀಡಲಾಗುತ್ತಿದೆ. ಅಲ್ಲಿನ ಶಿಕ್ಷಕರಿಗೆ ಸರಿಯಾದ ವೇತನ ಇಲ್ಲ. ಇಂಗ್ಲಿಷ್ ಶಬ್ದಗಳ ಪರಿಚಯ ಬಿಟ್ಟಂತೆ ಕಲಿಕೆಯ ಮಟ್ಟ ಅಲ್ಲೂ ಅಷ್ಟಕ್ಕಷ್ಟೆ ಎಂದು ಸಮಾನ ಶಿಕ್ಷಣ ನೀತಿಗೆ ಒತ್ತಾಯಿಸಿ ಚಳವಳಿ ಮಾಡುತ್ತಿರುವವರು ಆಕ್ಷೇಪಿಸುತ್ತಾರೆ. ಅವರ ಆರೋಪ ತಳ್ಳಿಹಾಕುವಂತಹವಲ್ಲ.

ಹೆಚ್ಚು ದುಡ್ಡು ಕೊಟ್ಟವರನ್ನು ಶಾಲಾಭಿವೃದ್ಧಿ ಸಮಿತಿಯ ಅಧ್ಯಕ್ಷರಾಗಿ ಮಾಡುವುದಾಗಿ ಶಿಕ್ಷಣ ಸಚಿವರೇ ಹೇಳುತ್ತಾರೆ. ಅಜೀಂ ಪ್ರೇಮ್‌ಜಿ ಮುಂದೆ ಭಿಕ್ಷೆಗೆ ಕೈಯೊಡ್ಡುತ್ತಾರೆ. ಊರ ಗೌಡ ಸಮಿತಿಯ ಅಧ್ಯಕ್ಷನಾಗುತ್ತಾನೆ. ಅವನ ಮಕ್ಕಳು ಬೇರೆಲ್ಲೋ ಕಲಿಯುತ್ತಾರೆ. ಬಡವರ ಮಕ್ಕಳಿಗೆ ಮಾತ್ರ ಸರ್ಕಾರಿ ಶಾಲೆ ಎನ್ನುವಂತಾಗಿದೆ. ಸಮೀಕ್ಷೆ ನಡೆಸುವ ಕ್ರಮದಲ್ಲಿ ಲೋಪ ಇದೆ. ಸರ್ಕಾರಿ ಶಾಲೆಗಳನ್ನು ಮಾತ್ರ ಹೀಗೆ ಪದೇ ಪದೇ ಸಮೀಕ್ಷೆ ನಡೆಸುವುದರ ಹಿಂದೆ ದೊಡ್ಡ ಹುನ್ನಾರವೇ ಇದೆ ಎಂದೂ ಸಮಾನ ಶಿಕ್ಷಣದ ಪರ ಇರುವವರು ಆಪಾದಿಸುತ್ತಾರೆ. ಸಚಿವ, ಶಾಸಕಾಂಗವೇ ಖಾಸಗಿ ಶಿಕ್ಷಣ ಸಂಸ್ಥೆಗಳ ಪರ ಇದ್ದರೆ ಇನ್ನಾರ ಮೊರೆ ಹೋಗುವುದು?

ನಾರಿಯೇ ತನ್ನ ಮನೆಯಲ್ಲಿ ಕಳುವೊಡೆ ಇನ್ನಾರಿಗೆ ದೂರುವುದು?

■ **ಗುಡಿಹಳ್ಳಿ ನಾಗರಾಜ**


ಈಶ್ವರ